ಜರ್ಸಿ ತಳಿಗಳ ಘನೀಕೃತ ವೀರ್ಯದಿಂದ ಕೃತಕ ಗರ್ಭಧಾರಣೆ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗುತ್ತಿದೆ.

2) ಲಸಿಕಾ ಕಾರ್ಯಕ್ರಮ : ಮಿಶ್ರತಳಿ ರಾಸುಗಳ ಆರೋಗ್ಯ ಸಂರಕ್ಷಣೆ ಸಲುವಾಗಿ ಸಾಮಾನ್ಯವಾಗಿ ಕಂಡುಬರುವ ಕಾಲುಬಾಯಿ ಜ್ವರ, ಚಪ್ಪೆ ರೋಗ, ನೆರಡಿ ರೋಗ, ಗಳಲೆ ರೋಗ ಮುಂತಾದವುಗಳ ವಿರುದ್ಧ ಉಚಿತ ಲಸಿಕೆ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗುತ್ತಿದೆ.

ಕರ್ನಾಟಕ ರಾಜ್ಯದಲ್ಲಿ ಸ್ಥಳೀಯ ದೇಶಿ ತಳಿಯ ಗೋವುಗಳಾದ ಹಳ್ಳಿಕಾರ್, ಅಮೃತ್ ಮಹಲ್, ದೇವಣಿ, ಕೃಷ್ಣವ್ಯಾಳಿ, ಖಿಲ್ಲಾರ್ ಮುಂತಾದ ತಳಿ ಸಂರಕ್ಷಣೆ ಹಾಗೂ ಅಭಿವೃದ್ಧಿಗಾಗಿ ಈ ಕೆಳಕಂಡ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ;

1) ಸುವರ್ಣ ಕರ್ನಾಟಕ ಗೋತಳಿ ಸಂರಕ್ಷಣೆ ಕಾರ್ಯಕ್ರಮ : ನೋಂದಾಯಿತ ಸರ್ಕಾರೇತರ ಸಂಸ್ಥೆಗಳಿಗೆ ರೂ.10.00 ಲಕ್ಷಗಳವರೆಗೆ ಒಮ್ಮೆ ಮಾತ್ರ ಸರ್ಕಾರದಿಂದ ಅನುದಾನ ನೀಡಲಾಗುವುದು.

2) ಸ್ವದೇಶಿಯ ತಳಿಗಳ ಸಂರಕ್ಷಣೆಗಾಗಿ ಜಾನುವಾರು ಕ್ಷೇತ್ರಗಳು : ಹಳ್ಳಿಕಾರ್ ತಳಿಗೆ ತುಮಕೂರು ಜಿಲ್ಲೆಯಲ್ಲಿ ಅಮೃತ್ ಮಹಲ್ ಚಿಕ್ಕಮಗಳೂರು ಜಿಲ್ಲೆಯಲ್ಲಿ, ಖಿಲಾರ್ ತಳಿಗೆ ಹಾವೇರಿ ಜಿಲ್ಲೆಯಲ್ಲಿ, ದೇವಣಿ ತಳಿಗೆ ಬೀದರ್ ಜಿಲ್ಲೆಯಲ್ಲಿ ಕ್ಷೇತ್ರಗಳಿದ್ದು ಸದರಿ ತಳಿಗಳ ಸಂರಕ್ಷಣೆ ಹಾಗೂ ಸಂವರ್ಧನೆ ನಡೆಸಲಾಗುತ್ತಿದೆ.

ರಾಯಚೂರು ಡೈರಿ ನಿರ್ಮಾಣದ ಕಾಮಗಾರಿ ಬಗ್ಗೆ

314 (592) ಶ್ರೀ ನಾಡಗೌಡ ವೆಂಕಟರಾವ್ (ಸಿಂಧನೂರು) : ಮಾನ್ಯ ಪಶುಸಂಗೋಪನಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಯಚೂರು ಡೈರಿ ನಿರ್ಮಾಣದ ಕಾಮಗಾರಿಯನ್ನು ಕರ್ನಾಟಕ ಹಾಲು ಮಹಾ ಮಂಡಳಿಯು ಯಾರಿಗೆ ವಹಿಸಲಾಗಿದೆ;

ಆ) ಕಾಮಗಾರಿಯನ್ನು ಗುತ್ತಿಗೆ ಷರತ್ತುಗಳ ಅನ್ವಯ ನಿಗದಿತ ಸಮಯದಲ್ಲಿ ಮುಗಿಸಲಾಗಿದೆಯೆ; ಹಾಗಿಲ್ಲದಿದ್ದಲ್ಲಿ, ಏನು ಕ್ರಮ ತೆಗೆದುಕೊಳ್ಳಲಾಗಿದೆ;

ಇ) ಈ ಕಾಮಗಾರಿ ಬಗ್ಗೆ ನ್ಯಾಯಾಲಯದ ಮುಂದೆ ಗುತ್ತಿಗೆದಾರರು ಮೊಕದ್ದಮೆ ಹೂಡಿರುವುದು ನಿಜವೇ; ಹಾಗಿದ್ದಲ್ಲಿ,

ಇಲ್ಲಿಯವರೆವಿಗೂ ತೆಗೆದುಕೊಂಡ ಕ್ರಮಗಳ ಪೂರ್ಣ ವಿವರಗಳನ್ನು ನೀಡುವುದು;

ಈ) ಪ್ರಕರಣ ನ್ಯಾಯಾಲಯದ ಮುಂದೆ ಇರುವಾಗ ಕರ್ನಾಟಕ ಹಾಲು ಮಹಾ ಮಂಡಳಿಯು ಆಡಳಿತ ಮಂಡಳಿಯಲ್ಲಿ ವಿಷಯ ಮಂಡಿಸಿ ತೀರ್ಮಾನಿಸಬಹುದೆ;

ಉ) ಗುತ್ತಿಗೆದಾರರು ಲಿಖಿತ ಮೂಲಕ ಪ್ರಕರಣ ಇತ್ಯರ್ಥಕ್ಕೆ ಒಪ್ಪಿಕೊಂಡಿದ್ದ ಮೊತ್ತಕ್ಕಿಂತಲೂ ಹೆಚ್ಚಿನ ಮೊತ್ತಕ್ಕೆ ನ್ಯಾಯಾಲಯ ತೀರ್ಪು ನೀಡಿರುವುದು ನಿಜವೇ;

ಊ) ಹೀಗಿದ್ದಾಗ್ಯೂ, ಮೇಲ್ಮನವಿ ದಾಖಲಿಸದೇ ಗುತ್ತಿಗೆದಾರರಿಗೆ ಅವರೇ ಒಪ್ಪಿದ ಮೊತ್ತಕ್ಕಿಂತಲೂ ಹೆಚ್ಚಿನ ಮೊತ್ತ ಕೊಟ್ಟಿರುವುದು ನಿಜವೇ;

ಋ) ಹಾಗಿದ್ದಲ್ಲಿ ಇದಕ್ಕೆ ಜವಾಬ್ದಾರರಾರು; ಅವರ ಮೇಲೆ ಏನು ಕ್ರಮ ತೆಗೆದುಕೊಳ್ಳಲಾಗುವುದು;

ಶ್ರೀ ರೇವೂ ನಾಯಕ್ ಬೆಳಮಗಿ (ಪಶುಸಂಗೋಪನಾ ಸಚಿವರು) :

ಅ) ರಾಯಚೂರು ಡೈರಿ ನಿರ್ಮಾಣದ ಕಾಮಗಾರಿಯನ್ನು ಶ್ರೀ ಸಿದ್ದಣ್ಣ, ಗುತ್ತಿಗೆದಾರರು, ದಾವಣಗೆರೆ ಇವರಿಗೆ ವಹಿಸಲಾಗಿತ್ತು.

ಆ) ಕಾಮಗಾರಿಯನ್ನು ನಿಗದಿತ ಸಮಯದಲ್ಲಿ ಮುಗಿಸಿರುವುದಿಲ್ಲ.

ಗುತ್ತಿಗೆದಾರರ ಭದ್ರತಾ ಠೇವಣಿ ಹಾಗೂ ಅವರ ಅಂತಿಮ ಬಿಲ್ಲಿನಲ್ಲಿ ಭಾಗಶಃ ಮೊತ್ತವನ್ನು ತಡೆಹಿಡಿಯಲಾಗಿತ್ತು.

ಇ) ನಿಜ.

ರಾಯಚೂರು ನ್ಯಾಯಾಲಯದ ಆದೇಶ ದಿನಾಂಕ: 04.12.2009ನ್ನು ಗಮನದಲ್ಲಿರಿಸಿ ದಿನಾಂಕ: 05.12.2009ರಂದು ನಡೆದ ಮಂಡಳಿ ಸಭೆಯಲ್ಲಿ ವಿಷಯವನ್ನು ಚರ್ಚಿಸಿ ದಾವೆಯು ವಜಾಗೊಂಡ ಹಿನ್ನೆಲೆಯಲ್ಲಿ ಗುತ್ತಿಗೆದಾರರೊಡನೆ ಸಂಧಾನ ನಡೆಸಿ ಪ್ರಕರಣವನ್ನು ಇತ್ಯರ್ಥಗೊಳಿಸಲು ಅಧ್ಯಕ್ಷರು, ಕರ್ನಾಟಕ ಹಾಲು ಮಹಾ ಮಂಡಳಿಗೆ ಅಧಿಕಾರ ನೀಡಲಾಗಿರುತ್ತದೆ. ಅದರಂತೆ ವಿಷಯವನ್ನು ಪರಿಶೀಲಿಸಿ ಗುತ್ತಿಗೆದಾರರ ಕ್ಲೈಮನ್ನು ಹಾಗೂ ಅದಕ್ಕೆ ಆಗುವ ಬಡ್ಡಿಯನ್ನು ಐತೀರ್ಪಿನಲ್ಲಿ ಆದೇಶಿಸಿರುವಂತೆ ಲೆಕ್ಕ ಮಾಡಿ ಗುತ್ತಿಗೆದಾರರಿಗೆ ಪಾವತಿಸಲಾಗಿದೆ.

ಈ) ಇಲ್ಲ.

ಉ) ಇಲ್ಲ.

ಊ) ಇಲ್ಲ.

ಋ) ಪ್ರಶ್ನೆ ಉದ್ಭವಿಸುವುದಿಲ್ಲ.

315 (696) ಶ್ರೀ ನರೇಂದ್ರ ಬಾಬು ಸಿ.ಎ. (ಮಹಾಲಕ್ಷ್ಮಿ ಲೇಔಟ್) : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಿಂದ ಅನುಷ್ಠಾನಗೊಂಡ/ಅನುಷ್ಠಾನಗೊಳ್ಳುತ್ತಿರುವ ಯೋಜನೆಗಳು ಯಾವುವು? ಸದರಿ ಯೋಜನೆಗಳಿಗೆಂದು ವೆಚ್ಚ ಮಾಡಲಾದ ಹಣವೆಷ್ಟು (ಯೋಜನೆವಾರು ಮತ್ತು ಜಿಲ್ಲಾವಾರು ಮಾಹಿತಿ ನೀಡುವುದು);

ಆ) ಯೋಜನೆಗಳ ಅನುಷ್ಠಾನದಲ್ಲಿ ಏನಾದರೂ ಲೋಪದೋಷಗಳು ಪತ್ತೆ ಮಾಡಲಾಗಿದೆಯೇ (ವಿವರ ಒದಗಿಸುವುದು);

ಇ) ಇಲಾಖೆಯ ವತಿಯಿಂದ ಹಮ್ಮಿಕೊಳ್ಳುವ ಯೋಜನೆಗಳಾವುವು;

ಈ) ಸದರಿ ಯೋಜನೆಗಳಿಗೆ ಸರ್ಕಾರ ಎಷ್ಟು ಹಣ ಮೀಸಲಿಟ್ಟಿದೆ?

ಶ್ರೀ ಜಗದೀಶ್ ಶೆಟ್ಟರ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ಸಚಿವರು) :

ಅ) ರಾಜ್ಯದಲ್ಲಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಿಂದ ಅನುಷ್ಠಾನಗೊಂಡ/ಅನುಷ್ಠಾನಗೊಳ್ಳುತ್ತಿರುವ ಯೋಜನೆಗಳ ವಿವರವನ್ನು ಅನುಬಂಧ 1ರಲ್ಲಿ ಹಾಗೂ ಯೋಜನಾವಾರು ವೆಚ್ಚದ ವಿವರವನ್ನು ಅನುಬಂಧ 2ರಲ್ಲಿ ಒದಗಿಸಿದೆ.

ಆ) ಯೋಜನೆಗಳ ಅನುಷ್ಠಾನದಲ್ಲಿ ಯಾವುದೇ ಲೋಪದೋಷಗಳು ಕಂಡು ಬಂದಿರುವುದಿಲ್ಲ.

ಇ) ಅನುಬಂಧ–1ರಲ್ಲಿ ವಿವರಿಸಲಾದ ಯೋಜನೆಗಳನ್ನೇ ಮುಂದುವರೆಸಲಾಗುವುದು.

ಈ) ವಿವರವನ್ನು ಅನುಬಂಧ–1 ರಲ್ಲಿ ಒದಗಿಸಿದೆ.